## ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಆರೋಗ್ಯ ಮತ್ತು ಪರಿಸರ

| ಕ್ರ. ಸಂ. | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನಕ್ಕೆ ಸೂಚನೆಗಳು |
|---|---|---|---|
| 1. | ಕುಟುಂಬದ ಕುರಿತಾಗಿ ಮಾತನಾಡುವರು. ಕುಟುಂಬದ ವ್ಯಕ್ತಿಗಳ ನಡುವಿನ ಸಂಬಂಧವನ್ನು ಗುರುತಿಸುವರು. | 3 | • ತನ್ನ ಕುಟುಂಬದಲ್ಲಿರುವ ಸದಸ್ಯರನ್ನು ಹೆಸರಿಸಲು ಹೇಳಬಹುದಾಗಿದೆ<br>• ಮನೆಯ ಚಿತ್ರ ಬಿಡಿಸಲು ಹೇಳಿ ಅದರಲ್ಲಿ ತನ್ನ ಮನೆಯಲ್ಲಿರುವ ಸದಸ್ಯರ ಚಿತ್ರ (ಮಗುವಿಗೆ ತೋಚಿದ ರೀತಿಯಲ್ಲಿ) ಬಿಡಿಸಲು ಹಾಗೂ ಅದರ ಕುರಿತು ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪ್ರತಿ ಮಗುವಿಗೆ ಒಂದು ಬಿಳಿ ಹಾಳೆ ಕೊಟ್ಟು ಮನೆಯಲ್ಲಿರುವ ತನ್ನ ಸದಸ್ಯರ ಬಲ ಹಸ್ತದ ಅಚ್ಚು ತೆಗೆದುಕೊಂಡು ಬಂದು ತರಗತಿಯಲ್ಲಿ ಅವು ಯಾರು ಯಾರದ್ದೆಂದು ಹೇಳಲು ತಿಳಿಸಬಹುದಾಗಿದೆ. |
| 2. | ದೇಹದ ವಿವಿಧ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ವಿವರಿಸುವರು. | 3 | • ಈರುಳ್ಳಿ ಸಿಪ್ಪೆ ಬಿಡಿಸುವ ಆಟದ ಮೂಲಕ ತನಗೆ ಬಂದ ಅಂಗಗಳ ಹೆಸರು ಹಾಗೂ ಅವುಗಳ ಕಾರ್ಯಗಳ ಬಗ್ಗೆ ಹೇಳಿಸಬಹುದಾಗಿದೆ. ಪಾತ್ರಾಭಿನಯದ ಮೂಲಕವೂ ಆಯಾ ಅಂಗಗಳ ಕಾರ್ಯಗಳನ್ನು ಹೇಳಿಸಬಹುದಾಗಿದೆ.<br>• ಇ.ಎನ್.ಕೆ. ನಲ್ಲಿ ಬಳಸುತ್ತಿರುವ ಸೈಮನ್ ಸೇಯ್ಸ್ ಆಟದ ರೀತಿಯಲ್ಲಿ ಮಕ್ಕಳಿಂದ ಅಂಗಗಳನ್ನು ಗುರುತಿಸುವ ಹಾಗೂ ಅವುಗಳ ಕಾರ್ಯಗಳನ್ನು ಹೇಳಿಸುವ ಚಟುವಟಿಕೆ ಮಾಡಿಸಬಹುದಾಗಿದೆ.<br>• ಮಕ್ಕಳಿಗೆ ವೃತ್ತಾಕಾರದಲ್ಲಿ ನಿಲ್ಲಿಸಿ ಕೆಲವರಿಗೆ ಅಂಗಗಳ ಹಾಗೂ ಇನ್ನು ಕೆಲವರಿಗೆ ಅವುಗಳ ಕಾರ್ಯಗಳ ಚಿತ್ರ ಮಿಂಚುಪಟ್ಟಿಗಳನ್ನು ಕೊಟ್ಟು ಇ.ಎನ್.ಕೆ. ಯಲ್ಲಿನ ಫೈರ್ ಆನ್ ದ ಮೌಂಟೈನ್ ಮಾದರಿಯಲ್ಲಿ ಆಟ ಆಡಿಸಬಹುದಾಗಿದೆ.<br>• ಮನುಷ್ಯನ ಚಿತ್ರ ಬಿಡಿಸಲು ಹೇಳಿ, ಅದರ ಭಾಗಗಳನ್ನು ಮೌಖಿಕವಾಗಿ ಹೇಳಿಸಬಹುದಾಗಿದೆ. |
| 3. | ವಿವಿಧ ವೃತ್ತಿಗಳನ್ನು ಗುರುತಿಸುವರು ಹಾಗು ಅವುಗಳ ಮಹತ್ವವನ್ನು ತಿಳಿಯುವರು ಹಾಗು ಸಮಾಜಕ್ಕೆ ಕೊಡುಗೆ ನೀಡುವ ದೃಷ್ಟಿಯಿಂದ ತಮ್ಮ ಸಾಮರ್ಥ್ಯ ಹಾಗು ಆಸಕ್ತಿಯನ್ನು ವ್ಯಕ್ತ ಪಡಿಸುವರು. | 3 | • ವಿವಿಧ ವೃತ್ತಿಗಳ ಮಿಂಚುಪಟ್ಟಿಗಳನ್ನು ಬಳಸಿ, ಅಶು ಭಾಷಣ, ಪಾತ್ರಾಭಿನಯದ ಮೂಲಕ ಆಯಾ ವೃತ್ತಿನಿರತರ ಕಾರ್ಯ ಮತ್ತು ಮಹತ್ವಗಳನ್ನು ಹೇಳಿಸಬಹುದಾಗಿದೆ.<br>• ಪಾಸಿಂಗ್ ದ ಬಾಲ್ ಆಟದ ಮೂಲಕ ತಾನು ದೊಡ್ಡವನಾದ ಮೇಲೆ ಏನಾಗಬಯಸುವೆ ಎಂಬ ಬಗ್ಗೆ ತನ್ನದೇ ಮಾತುಗಳಲ್ಲಿ ಹೇಳಲು ಪ್ರೋತ್ಸಾಹಿಸಬಹುದಾಗಿದೆ.<br>• ಸಮೀಕ್ಷೆಯ ಮೂಲಕ ತನ್ನ ಸುತ್ತಲಿನ ವೃತ್ತಿಗಳನ್ನು ಪಟ್ಟಿ ಮಾಡಿಸಿ, ಅವುಗಳ ಪ್ರಾಮುಖ್ಯತೆಯ ಬಗ್ಗೆ ಚರ್ಚೆ ಮಾಡಿಸಬಹುದಾಗಿದೆ. |
| 4. | ತಾವು ಸೇವಿಸುವ ಆಹಾರಗಳನ್ನು ಪಟ್ಟಿ ಮಾಡುವರು ಹಾಗೂ ತನ್ನ ಆಯ್ಕೆಯ (ಇಷ್ಟದ) ಆಹಾರ ವಸ್ತುಗಳ ಬಗ್ಗೆ ಮಾತನಾಡುವರು. | 3 | • ಗುಂಪುಗಳಲ್ಲಿ ಯೋಜನಾ ಕಾರ್ಯವನ್ನು, ಮೌಖಿಕ ಪ್ರಶ್ನಾವಳಿಗಳನ್ನು ಬಳಸಿ, ಚರ್ಚೆ ಮಾಡಬಹುದಾಗಿದೆ.<br>• ಮೀನು –ಗಾಳ ಚಟುವಟಿಕೆಯ ಮೂಲಕ ತನ್ನ ಇಷ್ಟದ ತರಕಾರಿ/ಹಣ್ಣುಗಳನ್ನು ಆರಿಸಿ ಅದರ ಬಗ್ಗೆ ಅಭಿಪ್ರಾಯ ಹೇಳಿಸಬಹುದಾಗಿದೆ.<br>• ಪ್ರತಿ ಮಗು ಮನೆಯಿಂದ ಯಾವುದಾದರೊಂದೊಂದು ತರಕಾರಿ/ಹಣ್ಣು ತಂದು, ಅದರ ಹೆಸರು ಹೇಳುವುದರ ಜೊತೆಗೆ ಅದರಿಂದ ತಯಾರಿಸಿದ, ತಾನು ತಿಂದಿರುವ ತನ್ನ ಇಷ್ಟದ ಆಹಾರ ಪದಾರ್ಥಗಳ ಬಗ್ಗೆ ಹೇಳಿಸಬಹುದಾಗಿದೆ. |
| 5. | ತಮ್ಮ ದಿನನಿತ್ಯದ ಕಾರ್ಯಗಳನ್ನು (ದಿನಚರಿ) ವಿವರಿಸುವರು. | 3 | • ಮಗು ತಾನು ದಿನನಿತ್ಯ ಮಾಡುವ ಕೆಲಸಗಳನ್ನು ಪಟ್ಟಿ ಮಾಡಿಸಬಹುದಾಗಿದೆ.<br>• ತಪಶೀಲು ಪಟ್ಟಿಗಳನ್ನು ಬಳಸಿ ಅವಲೋಕನಾ ತಂತ್ರದ ಮೂಲಕ ಮೌಲ್ಯಾಂಕನ ಮಾಡಬಹುದಾಗಿದೆ<br>• ವಿವಿಧ ಕೆಲಸಗಳನ್ನು ಅಭಿನಯಿಸಿ ತೋರಿಸಲು ಹಾಗೂ ಬೇರೆಯವರು ಮಾಡಿದ ಅಭಿನಯಗಳನ್ನು ಗುರುತಿಸಲು ಅವಕಾಶ ನೀಡಬಹುದಾಗಿದೆ. |
| ಒಟ್ಟು | | 15 | |

**ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಆರೋಗ್ಯ ಮತ್ತು ಪರಿಸರ – ಶಿಕ್ಷಕರ ವೈಯಕ್ತಿಕ ನಮೂದು ವಹಿ**

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಗ್ರೇಡ್ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ↓ ವಿದ್ಯಾರ್ಥಿಗಳ ಹೆಸರು | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

**ಶಿಕ್ಷಕರ ಸಹಿ** **ಮುಖ್ಯ ಶಿಕ್ಷಕರ ಸಹಿ**

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಪರಿಸರ ಅಧ್ಯಯನ

| ಕ್ರ. ಸಂ. | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನಕ್ಕೆ ಸೂಚನೆಗಳು |
|---|---|---|---|
| 1. | ಕುಟುಂಬದ ಸದಸ್ಯರ ಪಾತ್ರಗಳು ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು. | 03 | • ಕುಟುಂಬ ನಕ್ಷೆಯನ್ನು ಬಿಡಿಸುವ ಮೂಲಕವಾಗಲಿ ಕುಟುಂಬದ ಸದಸ್ಯರಿರುವ ಭಾವಚಿತ್ರವನ್ನು ಪ್ರದರ್ಶಿಸುತ್ತಾ ಅಥವಾ ತಮ್ಮ ಕುಟುಂಬದ ಸದಸ್ಯರ ಬಗ್ಗೆ ಮೌಖಿಕವಾಗಿ ಅವರ ಕಾರ್ಯಗಳನ್ನು ಹೇಳುತ್ತಾ ಕುಟುಂಬದ ಸದಸ್ಯರನ್ನು ಪರಿಚಯಿಸಿಕೊಳ್ಳಬಹುದಾಗಿದೆ.<br>• ತಮ್ಮ ಸ್ನೇಹಿತರ ಸಹಾಯದಿಂದ ಕುಟುಂಬದ ಸದಸ್ಯರು ನಿರ್ವಹಿಸುವ ಪಾತ್ರಗಳನ್ನು ಅಭಿನಯಿಸಲು ತಿಳಿಸಬಹುದಾಗಿದೆ.<br>• ತನ್ನ ಕುಟುಂಬದಲ್ಲಿ ಈಗಿರುವ ಸದಸ್ಯರ ಹೆಸರುಗಳನ್ನು ಹಂಚಿಕೊಳ್ಳಲು ತಿಳಿಸಬಹುದಾಗಿದೆ.<br>• ತನ್ನ ಕುಟುಂಬದ ಸದಸ್ಯರು ನಿರ್ವಹಿಸುವ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಅವರಿಗೆ 'ಧನ್ಯವಾದ ಕಾರ್ಡ' ತಯಾರಿಸಲು ತಿಳಿಸಬಹುದಾಗಿದೆ.<br>• ತನ್ನ ಮನೆಯ ಸದಸ್ಯರಿಗೆ ನೆರವಾಗುವಂತೆ ತಾನು ಮಾಡಿದ ಕೆಲಸಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲು ತಿಳಿಸಬಹುದಾಗಿದೆ. |
| 2. | ಆಹಾರದ ವಿವಿಧ ಮೂಲಗಳನ್ನು ಮತ್ತು ಅಡುಗೆ ಮನೆಯಲ್ಲಿ ಆಹಾರ ತಯಾರಿಸಲು ಬಳಸುವ ಪರಿಕರಗಳನ್ನು ಪಟ್ಟಿಮಾಡುವರು. | 03 | • ತನ್ನ ಮನೆಯಿಂದ ತಂದ/ಚಿತ್ರ ಮಾದರಿಯ ಒಂದು ಹಣ್ಣು/ತರಕಾರಿಯ ಬಗ್ಗೆ ಮಾತನಾಡಿಸಬಹುದಾಗಿದೆ.<br>• ತಾನು ತಿಂದಿರುವ/ತಿಳಿದಿರುವ ತರಕಾರಿ/ಹಣ್ಣುಗಳ ಚಿತ್ರ ಬಿಡಿಸಿ ಬಣ್ಣ ತುಂಬಲು ತಿಳಿಸಬಹುದಾಗಿದೆ.<br>• ತಾನು ಸೇವಿಸಿದ ಎರಡು ಆಹಾರ ಪದಾರ್ಥಗಳು, ಅವುಗಳ ಮೂಲ ಯಾವುದೆಂದು ಗುರುತಿಸಲು ತಿಳಿಸಿ ತನಗೆ ಆಹಾರ ಒದಗಿಸಿದ ಸಸ್ಯ ಹಾಗೂ ಪ್ರಾಣಿಗಳಿಗೆ ಕೃತಜ್ಞತಾ ಭಾವನೆಯನ್ನು ಹಂಚಿಕೊಳ್ಳಲು ಹೇಳಬಹುದಾಗಿದೆ.<br>• ತಮ್ಮ ಮನೆಯಲ್ಲಿ ಬಳಸುವ ಒಂದು ಅಡುಗೆ ಪಾತ್ರೆಯ ಚಿತ್ರ ಬಿಡಿಸಿ ಅದರ ಉಪಯೋಗ ಹೇಳಲು ತಿಳಿಸಬಹುದಾಗಿದೆ.<br>• ಒಂದು ನಿರ್ದಿಷ್ಟ ಆಹಾರ ಪದಾರ್ಥ ತಯಾರಿಸಲು ಬೇಕಾದ ಪಾತ್ರೆ–ಪರಿಕರಗಳ ಪಟ್ಟಿ ಮಾಡಲು ತಿಳಿಸಬಹುದಾಗಿದೆ. |
| 3. | ಸಸ್ಯದ ಭಾಗಗಳನ್ನು ಗುರುತಿಸಿ, ನಿತ್ಯ ಜೀವನದಲ್ಲಿ ಅವುಗಳ ಉಪಯೋಗಗಳನ್ನು ತಿಳಿಸುವರು. | 03 | • ಸಸ್ಯದ ಚಿತ್ರ ತೆಗೆದು ಅದರ ಭಾಗಗಳನ್ನು ಗುರುತಿಸಲು ತಿಳಿಸಬಹುದಾಗಿದೆ.<br>• ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೆ ಸಸ್ಯದ ಒಂದೊಂದು ಭಾಗ ಉದಾ: ಗಜ್ಜರಿ (ಬೇರು) ಪಾಲಕದ ಸೊಪ್ಪು (ಎಲೆ ಮತ್ತು ಕಾಂಡ), ಕರಿಬೇವು (ಎಲೆ) ಕೊಟ್ಟು ಅದು ಸಸ್ಯದ ಯಾವ ಭಾಗದಿಂದ ಬಂದಿದೆ, ಅದರ ಉಪಯೋಗವೇನು? ಎಂಬುದನ್ನು ಚರ್ಚಿಸಲು ತಿಳಿಸಿ ಚರ್ಚೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಹೇಳಲು ತಿಳಿಸಬಹುದಾಗಿದೆ.<br>• ಮನೆಯಲ್ಲಿ ಉಪಯೋಗಿಸುವ ತರಕಾರಿಗಳು ಸಸ್ಯದ ಯಾವ ಭಾಗದಿಂದ ಬಂದಿವೆ ಎಂಬುದರ ಬಗ್ಗೆ ಸಮೀಕ್ಷೆ ತಿಳಿಸಬಹುದಾಗಿದೆ.<br>• ಸಸ್ಯಗಳನ್ನು ಪೋಷಿಸಿ ಬೆಳೆಸಿ ಕೈತೋಟ ನಿರ್ಮಿಸಲು ತಿಳಿಸಬಹುದಾಗಿದೆ. |

| | | | |
|---|---|---|---|
| 4. | **ಒಳಾಂಗಣ ಮತ್ತು ಹೊರಾಂಗಣ ಆಟಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವರು.** | 03 | • ತಾನು ಆಡಿರುವ ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣವೆಂದು ವಿಂಗಡಿಸಲು ತಿಳಿಸಬಹುದಾಗಿದೆ.<br>• ಶಾಲೆಯಲ್ಲಿನ ಆಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ತಿಳಿಸಬಹುದಾಗಿದೆ.<br>• ಆಟಿಕೆ ಸಾಮಗ್ರಿಗಳನ್ನು ಆಧರಿಸಿ ಆಟದ ಹೆಸರು ಹೇಳುತ್ತಾ ಅದು ಒಳಾಂಗಣವೇ, ಹೊರಾಂಗಣವೇ ಎಂದು ಕಾರಣ ಸಹಿತ ವಿವರಿಸಲು ತಿಳಿಸಬಹುದಾಗಿದೆ.<br>• ತನಗೆ ಬೇಕಾದ ಆಟಿಕೆಯನ್ನು ತಯಾರಿಸಿ ತನ್ನ ಸ್ನೇಹಿತರೊಂದಿಗೆ ಆಡಲು ತಿಳಿಸಬಹುದಾಗಿದೆ.<br>• ತನಗೆ ಇಷ್ಟವಾದ ಆಟಗಳು, ಅವುಗಳನ್ನು ಇಷ್ಟ ಪಡಲು ಕಾರಣಗಳನ್ನು ವಿವರಿಸಲು ತಿಳಿಸಬಹುದಾಗಿದೆ. |
| 5. | **ತನ್ನ ಕುಟುಂಬದ ಮತ್ತು ನೆರೆಹೊರೆ ಕುಟುಂಬದ ಸದಸ್ಯರು ಮತ್ತು ಸ್ನೇಹಿತರೊಂದಿಗೆ ಹಾಗೂ ಸಾಕು ಪ್ರಾಣಿಗಳೊಂದಿಗೆ ಕಾಳಜಿ ಮತ್ತು ಗೌರವವನ್ನು ವ್ಯಕ್ತಪಡಿಸುವರು.** | 03 | • ತನ್ನ ಕುಟುಂಬದ ಸದಸ್ಯರಿಗೆ ಸಹಾಯ ಮಾಡಿ ಅವರಿಂದ ಮೆಚ್ಚುಗೆ ಪಡೆದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ.<br>• ತನ್ನ ಸ್ನೇಹಿತರಿಗೆ ತಾನು ಮಾಡಿದ ಸಹಾಯದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ. (ಉದಾ: ಆಟ ಆಡುವಾಗ ಸ್ನೇಹಿತನೊಬ್ಬನು ಬಿದ್ದಾಗ ಉಪಚರಿಸುವ ಕ್ರಮ)<br>• ತನ್ನ ನೆರೆಹೊರೆಯವರೊಂದಿಗೆ ಸಹಾಯ ಮಾಡಿ ಅವರಿಂದ ಮೆಚ್ಚುಗೆ ಪಡೆದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ.<br>• ಪಕ್ಷಿಗಳಿಗೆ ಆಹಾರದಾನಿ ತಯಾರಿಸಿ, ಅದನ್ನು ತರಗತಿಯಲ್ಲಿ ಪ್ರದರ್ಶಿಸಿ ಮನೆಯ ಸುತ್ತಲಿನ ಗಿಡ ಮರಕ್ಕೆ ತೂಗು ಹಾಕುವುದರ ಮೂಲಕ ಅವುಗಳಿಗೆ ಆಹಾರ ಒದಗಿಸಲು ತಿಳಿಸಬಹುದಾಗಿದೆ.<br>• ಸಾಕು ಪ್ರಾಣಿಗಳೊಂದಿಗೆ ತಮ್ಮ ಒಡನಾಟವನ್ನು, ಅವು ತಮಗೆ ತೋರಿಸುವ ಪ್ರೀತಿಯನ್ನು ಹಾಗೂ ಅವುಗಳಿಗೆ ತಾವು ತೋರಿಸುವ ಕಾಳಜಿಯನ್ನು ಚಿತ್ರದ ಮೂಲಕ ಅಥವಾ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಲು ತಿಳಿಸಬಹುದಾಗಿದೆ. |
| **ಒಟ್ಟು** | | **15** | |

# ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಪರಿಸರ ಅಧ್ಯಯನ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಪಡೆದ ಅಂಕಗಳು | ಶೇಕಡಾ | ಗ್ರೇಡ್ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು →<br>↓ ವಿದ್ಯಾರ್ಥಿಗಳ ಹೆಸರು | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

**ಶಿಕ್ಷಕರ ಸಹಿ** **ಮುಖ್ಯ ಶಿಕ್ಷಕರ ಸಹಿ**